ಇದು ಬಹಳಷ್ಟು ಸಲೀಸು ಅಂದುಕೊಳ್ಳುತ್ತಾಳೆ. ಹುಡುಗರೊಡನೆ ಫ್ರೀಯಾಗಿ ನಡೆದುಕೊಳ್ಳುವುದು ಹೇಗೆ ಎಂಬುದೇ ಅವಳ ಸಮಸ್ಯೆ. ಪ್ರಾರಂಭದಲ್ಲೇನೋ ಸ್ನೇಹದಿಂದ ನಗುತ್ತಾಳೆ. ಮಾತನಾಡುತ್ತ ಆಡುತ್ತ ಗಂಭೀರವಾಗಿ ವಿಷಯಗಳ ಚರ್ಚೆಗಿಳಿದು ಬಿಡುತ್ತಾಳೆ. ಆಗ ಒಮ್ಮೆಲೆ ಸೀನೇ ಬದಲಾಗುತ್ತದೆ!. ತುಸುವೇ ಅಲುಗಾಡಿದ ಬೆಲ್ಲದ ಅಚ್ಚಿನಿಂದ ದುಬದುಬನೆ ದೂರ ಸರಿಯುವ ಗೊದ್ದಗಳಂತೆ ಅವಳನ್ನು ಅವರಿಸಿರುತ್ತಿದ್ದ ಗಂಡಿನ ಹಿಂಡು ಮೆಲ್ಲಮೆಲ್ಲನೆ ಹಿಂದೆ ಸರಿದು ಬಿಡುತ್ತಿತ್ತು. ಆಗೆಲ್ಲ ಅವಳು ಪೆಚ್ಚಾಗಿ, ತನ್ನ ತಪ್ಪೆಲ್ಲಿ ಎಂದು ಗದ್ದಕ್ಕೆ ಕೈ ಒತ್ತಿಕೊಳ್ಳುತ್ತಾಳೆ. ಅಂದರೆ ತನ್ನದು ಅಷ್ಟು ಕಲ್ಲುಹೃದಯವೇ.. ರಸಹೀನ ನಡವಳಿಕೆಯೇ.. ಪ್ರೇಮದ ಸೋಂಕೇ ಅರಿಯದವಳೇ ತಾನು, ತನ್ನಲ್ಲಿ ಹೆಣ್ಣಿನ ಭಾವನೆಗಳೇ ಇಲ್ಲವೇ ಎಂದು ತನ್ನ ಮನಸ್ಸನ್ನು ಗುದ್ದಿ ಗುದ್ದಿ ಕೇಳುತ್ತಾಳೆ.

ಯಾಕೋ ಅಂತೂ ಅವಳಿಗೆ ಯಾರನ್ನೂ ಪ್ರೀತಿಸಲಾಗಲೇ ಇಲ್ಲ. ಅದೊಂದು ದುರಂತವೇ ಸರಿ... ಅವಳ ಮನಸ್ಸಿನ ಎಲ್ಲ ಕವಲುಗಳಿಗೂ ತೃಪ್ತಿ ಕೊಟ್ಟ ಹುಡುಗನೇ ಸಿಗಲಿಲ್ಲವೇನೋ? ಆದರೂ ಅವಳಲ್ಲಿ ನಿರಾಶೆಯ ಬುಗ್ಗೆ ಒಡೆದಿರಲಿಲ್ಲ. ಹಾಗೇ ನೋಡಿದರೆ, ಅವಳಿಗೆ ಎಷ್ಟೋ ಹುಡುಗರು ಇಷ್ಟವಾಗುತ್ತಾರೆ, ಆದರೆ ಅವರನ್ನು ಮದುವೆಯಾಗುವ ಹಂಬಲ ಮಾತ್ರ ಚಿಗಿಯದು. ಸುಂದರ ಹುಡುಗರತ್ತ ದೃಷ್ಟಿ ಹಾಯುತ್ತದೆ. ಹಾಗೇ ಸುಮ್ಮನೆ. ಮನಸ್ಸು ಬೆಚ್ಚಗಾಗುತ್ತದೆ.

ಅಪ್ಪಿ ತಪ್ಪಿ ಹುಡುಗರೇನಾದರೂ ಮದುವೆಯ ಪ್ರಸ್ತಾಪವೆತ್ತಿದರೆ- 'ನಂಗೊತ್ತಿಲ್ಲಪ್ಪ. ಮನೆಯಲ್ಲಿ ಕೇಳಬೇಕು' ಎಂದು ನುಣುಚಿಕೊಂಡು ಬಿಡುತ್ತಾಳೆ. ಕಿಲಾಡಿ..ಹಾಗಂತ, ತಂದೆ ತಾಯಿಗಳ ವಿಧೇಯ ಮಗಳೇನಲ್ಲ ಅವಳು. ತನ್ನೊಳಗಿನ ಭಾವನೆಗಳೇ ಅವಳಿಗೆ ಅಪರಿಚಿತ. ಎಲ್ಲ ಗೊಂದಲದ ಗೂಡು... ಅದವಳ ಮನಃಪೂರ್ವಕದ ಅಂಬೋಣವೋ. ಅಥವಾ ಯಾರನ್ನೂ ಆರಿಸಿಕೊಳ್ಳಲಾಗದ ಅಶಕ್ತತೆಯೋ, ಎಲ್ಲ ಅಯೋಮಯ. ಔಚಿತ್ಯವಿಲ್ಲದ ಇಬ್ಬಂದಿತನದ ನಿಲುವು! ಕಡೆಗೂ ಒಬ್ಬ ಸಿಕ್ಕೇ ಬಿಟ್ಟ, ಅವಳಿಚ್ಛೆಯ ಕಾಲಂಗಳಲ್ಲಿ ಹೆಚ್ಚು ರೈಟ್ ಮಾರ್ಕ್ ಕಂಡವನು. ದೂರದ ಸಂಬಂಧಿ...ಓಕೆ, ಇವನನ್ನೇ ಮದುವೆಯಾಗಿಬಿಟ್ಟರೆ ಹೇಗೆ? ಎಂದು ಒಂದೆರಡು ಬಾರಿ ಕೊಂಚ ಹಗುರವಾಗೇ ಯೋಚಿಸಿದ್ದಳು. ಆದರೆ, ಉಹೂಂ ಆ ಭಾವನೆಯೂ ಅವಳಲ್ಲಿ ಹೆಚ್ಚು ಕಾಲ ಬೀಡು ಬಿಡಲಿಲ್ಲ.

ಅಂತೂ ಅವಳು ಮನದಲ್ಲೇ ಅಳೆದೂ ಸುರಿದು, ಅನೇಕ ಹುಡುಗರನ್ನು ತಿಕ್ಕಿ ತೀಡಿ, ತನ್ನ ಅಭಿಪ್ರಾಯಗಳನ್ನು ಹೊರ ನೂಕುವುದಕ್ಕೆ ಮುಂಚೆಯೇ ಮನಸ್ಸಿನಲ್ಲೇ ತಿರ್ಮಾನವನ್ನು ಹೊಸೆದು ಬಿಡುತ್ತಿದ್ದಳು. ಆದರೆ ಅವಳ ಜೊತೆ ಇದ್ದವರಿಗೆ ಮಾತ್ರ ಅವಳಲ್ಲಿ ಮೂಡಿದ ಅನಿಸಿಕೆಯಾಗಿಲೀ, ನಡೆದ ಯೋಚನೆ, ತೀರ್ಮಾನಗಳಾಗಲೀ ಒಂದೂ ಗೊತ್ತಾಗುತ್ತಲೇ ಇರಲಿಲ್ಲ. ಎಂದಿನಂತೆ ಅವಳು ಆ ಯುವಕರೊಂದಿಗೆ ಮಕ್‌ಮಲ್ ನಗು ಚಿಮ್ಮಿಸುತ್ತ ಸ್ನೇಹಿತೆಯಂತೆಯೇ ಉಳಿದುಬಿಡುತ್ತಾಳೆ.

ಒಮ್ಮೆ ಅವಳು ಒಬ್ಬನನ್ನು ಪ್ರೀತಿಸಿದೆ ಅಂದುಕೊಂಡಳು. ಅಷ್ಟೇ, ಹೇಳಲಿಲ್ಲ. ಅಜ್ಜನಿಗೆ ಜ್ವರ ಬಂದಾಗ ಅದೇ ರಸ್ತೆಯಲ್ಲಿ ಹೊಸದಾಗಿ ತೆರೆದಿದ್ದ ಕ್ಲಿನಿಕ್‌ನಲ್ಲಿ ಯುವ ಡಾಕ್ಟರನ ಪರಿಚಯವಾಯಿತು. ದಾರಿಯಲ್ಲಿ ಹೋಗಿ ಬರುವಾಗ ಅವ ಮುಗುಳ್ನಕ್ಕ. ಅವನು ತನ್ನನ್ನು ಪ್ರೀತಿಸುತ್ತಿರಬೇಕೆಂದು ಅಂದುಕೊಂಡಳು, ತಾನೂ ನಕ್ಕಳು. ನಾನೂ ಪ್ರೀತಿಸಬೇಕು ಇನ್ಮೇಲೆ ಅಂದುಕೊಂಡಳು. ಮುಂದೆ ಮನೆಯಲ್ಲಿ ಯಾರಿಗೆ ಮೈ ಸರಿಯಾಗಿರದಿದ್ದರೂ ಅವಳೇ ಶಾಪಿಗೆ ಹೋಗುವುದಾಯಿತು. ಬಹಳ ಸರಸಿ ಎಂದು ಅವನು ಅವಳಿಗೆ ಮೆಚ್ಚಿಗೆಯಾಗಿಯೇ ಬಿಟ್ಟ. ಇವನನ್ನೇ ಯಾಕೆ ಮದುವೆಯಾಗಬಾರದು ಎಂದು ಒಂದು ದಿನ ಇದ್ದಕ್ಕಿದ್ದ ಹಾಗೆ ಅವಳ ಮನಸ್ಸಿಗೆ ಹೊಳೆಯಿತು. ಹೌದಲ್ಲ ಅಂದುಕೊಂಡಳು. ಆಗಬಹುದು ಎನಿಸಿತು. ಅವನ ಮುಂದೆ ತನ್ನ ಪ್ರೇಮಭಾವನೆಯನ್ನು ಪ್ರಕಟಪಡಿಸಬೇಕು ಅಂದುಕೊಂಡಿದ್ದಳಷ್ಟೇ.

ಆದರೆ ಹೀಗಂದುಕೊಂಡ ವಾರದಲ್ಲೇ ಅವಳಿಗೆ ತಿಳಿದ ವಿಷಯದಿಂದ ಶಾಕ್ ಆಯಿತು! ನನ್ನ ಹತ್ತಿರ ಖುಷಿಯಿಂದ ಇಂಜೆಕ್ಷನ್ ತೊಗೊಳ್ಳೋ ನಿಮ್ಮ ಅಜ್ಜ, ಸದಾ, ಮಡಿ, ಆಚಾರ ಅಂತ ಮಣಿಮಣಿ ಸುತ್ತಿರ್ತಾರಲ್ಲ, ನಂಜೊತೆ ಫ್ರೆಂಡ್‌ಶಿಪ್ ಓಕೆ ಮಾಡ್ತಾರಾ ಮೇಡಂ?..ನಾನು ಯಾರು ಗೊತ್ತಾ ?' ಎಂದು ಸೀದಾ ಎದೆಗೆ ಗುಂಡು ಬೀಸಿದಂತೆ ಕೇಳಿದಾಗ ಒಂದರೆಗಳಿಗೆ ಅವಳು ಬೆಚ್ಚಿದಳು!